# ಅಂಬೇಡ್ಕರ್ ಜಯಂತಿ : ನಿರಾಶ್ರಿತರಿಗೆ ದವಸ ಧಾನ್ಯ ವಿತರಣೆ

**ಚಿತ್ರದುರ್ಗ - ಏ. 14:** 1891ನೇ ಏಪ್ರಿಲ್ 14ರಲ್ಲಿ ಜನಿಸಿದ ಅಂಬೇಡ್ಕರ್‌ರವರು ಸಾಮಾಜಿಕ ಸಮಾನತೆ, ಅಸ್ಪೃಶ್ಯತಾ ನಿವಾರಣೆಗಾಗಿ ಹೋರಾಡಿದ ಮಹಾನ್ ಭಾರತೀಯ ನಾಯಕರಲ್ಲೊಬ್ಬರು. ಭಾರತದ ಸಂವಿಧಾನವನ್ನು ರಚಿಸಿದ ಇವರು ಸಂವಿಧಾನ ಶಿಲ್ಪಿಗಳಾದರು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

**ಶ್ರೀಮುರುಘರಾಜೇಂದ್ರ ಮಠದಲ್ಲಿ ಅಂಬೇಡ್ಕರ್ 129ನೇ ಜಯಂತಿ ನಿಮಿತ್ತ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಿರಾಶ್ರಿತರಿಗೆ ದವಸ ಧಾನ್ಯ ವಿತರಿಸಿ ಶ್ರೀಗಳು ಮಾತನಾಡಿದರು.**



ಅಂಬೇಡ್ಕರ್‌ರವರ ಜೀವನ, ವಿದ್ಯಾಭ್ಯಾಸ ಅತ್ಯಂತ ಕಷ್ಟದಲ್ಲಿ ನಡೆದಿತ್ತು. ಸಮಾಜದಲ್ಲಿರುವ ಅಸಮಾನತೆಯ ಬಗ್ಗೆ ಸಾಕಷ್ಟು ನೊಂದಿದ್ದರು. ಬಸವಣ್ಣನವರ ಸಮಾನತೆಯ ಪರಿಕಲ್ಪನೆ ಅವರಲ್ಲಿತ್ತು. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಸಮಾಜ ನಿರ್ಮಾಣವಾಗಬೇಕೆಂಬ ಆಶಯವನ್ನು ಹೊಂದಿದ್ದರು. ವಿಭಿನ್ನ ಸಮಾಜವನ್ನು ಆದರ್ಶ ಸಮಾಜವನ್ನಾಗಿ ಸುಖೀ ರಾಜ್ಯವನ್ನಾಗಿ ಬದಲಾಯಿಸುವ ಮೂಲಕ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳನ್ನು ಒಟ್ಟಿಗೆ ಸಾಧಿಸಬಲ್ಲ ಪ್ರಜಾಪ್ರಭುತ್ವವನ್ನು ಅವರು ಕಲ್ಪಿಸಿಕೊಂಡಿದ್ದರು. ಸಮಾನತೆ ಮತ್ತು ಸ್ವಾತಂತ್ರ್ಯ ಹೀಗೆ ಅವರು ಸಂಪನ್ಮೂಲಗಳ ಹಂಚಿಕೆಯಲ್ಲಿ ವ್ಯಕ್ತಿಗಳ ಸಮಾನ ಮೌಲ್ಯವನ್ನು ವಿವರಿಸುವ ಆರ್ಥಿಕ ಪ್ರಜಾಪ್ರಭುತ್ವ ಪದವನ್ನು ಬಳಸಿದ್ದಾರೆ. ಅವರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವ ಪ್ರಜಾಸತ್ತಾತ್ಮಕ ಸಮಾಜವನ್ನು ನಿರೀಕ್ಷಿಸುತ್ತದೆ. ಸಾಮಾಜಿಕ ಅಡೆತಡೆಗಳಿಂದ ಮುಕ್ತವಾದ ಸಮಾಜ ಕಲ್ಪನೆ ಅವರದ್ದಾಗಿತ್ತು.



ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಸಂಕಷ್ಟಕ್ಕೀಡಾಗಿರುವ ತೀರ ಹಿಂದುಳಿದ ಕುಟುಂಬಗಳಿಗೆ ಇಂದು ದವಸ ಧಾನ್ಯಗಳನ್ನು ಅಂಬೇಡ್ಕರ್ ಜಯಂತಿಯಂದು ವಿತರಿಸುತ್ತಿರುವುದು ನನಗೆ ಹೆಚ್ಚು ಅಭಿಮಾನವನ್ನು ಉಂಟುಮಾಡಿದೆ. ಅಂಬೇಡ್ಕರ್ ಅವರ ಕಲ್ಪನೆಯಂತೆ ಪ್ರತಿಯೊಬ್ಬರು ಸಾಮಾಜಿಕ ಅಸಮಾನತೆಯಿಂದ ಮೇಲೆ ಬರಬೇಕೆಂಬುದು ನನ್ನ ಆಶಯ. ಈ ಸಂದರ್ಭದಲ್ಲಿ ಛಲವಾದಿ ಗುರುಪೀಠದ ಶ್ರೀ ಬಸವ ನಾಗಿದೇವ ಸ್ವಾಮಿಗಳು, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಕಾರ್ಯನಿರ್ವಹಣಾಧಿಕಾರಿಗಳಾದ ಎಂ.ಜಿ.ದೊರೆಸ್ವಾಮಿ ಮೊದಲಾದವರು ಉಪಸ್ಥಿತರಿದ್ದರು.

